ಮೂಲ ದಾವಾ ಸಂಖ್ಯೆ. 115/2016 ಪಿ ಡಬ್ಲ್ಯೂ 4

(ದಿನಾಂಕ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಬಿ ವಕೀಲರಿಂದಃ-

1 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಹಾಕಿರುವ ಪೈಪ್ ಲೈನ್ ಅಕ್ಕಪಕ್ಕ ನನ್ನ ಜಮೀನುಗಳು ಇರುತ್ತವೆ. ನನ್ನ ಜಮೀನಿನ ಸರ್ವೆ ನಂ.351 ಮತ್ತು 352 ಇರುತ್ತದೆ. ಸದರಿ ಜಮೀನುಗಳ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿ ಹಾಕಿರುವ ಪೈಪ್ ಲೈನ್ ನಾನು ನೋಡಿದ್ದೇನೆ. 1 ನೇ ಪ್ರತಿವಾದಿ ಹಾಕಿರುವ ಪೈಪ್ ಲೈನ್ ಸರ್ವೆ ನಂ.104 ರಲ್ಲಿದೆ ಅದು ಟಿ ಬಿ ಬೋರ್ಡಿಗೆ ಸಂಬಂಧಿಸಿದ್ದು ಇರುತ್ತದೆಂದರೆ ಸರಿ. ಸರ್ವೆ ನಂ.104 ರಲ್ಲಿ 1 ನೇ ಪ್ರತಿವಾದಿಯು ಮೀನುಗಳನ್ನು ಸಂಗ್ರಹ ಮಾಡಲು ಗುಂಡಿಯನ್ನು ಮಾಡಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ಅವರು ಹಳ್ಳದಲ್ಲಿ ಮಾಡಿರುತ್ತಾರೆನ್ನುತ್ತಾರೆ. ನನ್ನ ಜಮೀನಿಗೆ ನಾನು ತುಂಗಭದ್ರಾ ನದಿಯಿಂದ ಪೈಪ್ ಲೈನ್ ಮಾಡಿಸಿಕೊಂಡಿರುವುದಿಲ್ಲ. ಈಗ ಅಲ್ಲಿ ತುಂಗಭದ್ರಾ ನದಿಯಿಂದ ಯಾರೂ ಪೈಪ್ ಲೈನ್ ಮೂಲಕ ನೀರನ್ನು ತೆಗೆಯುತ್ತಿಲ್ಲ ಎಲ್ಲರೂ ಬೋರ್ವೆಲ್ ಮಾಡಿಸಿಕೊಂಡಿರುತ್ತಾರೆ. ತುಂಗಭದ್ರಾ ನದಿಯಿಂದ ಜಮೀನುಗಳಿಗೆ ಪೈಪ್ ಲೈನ್ ಹಾಕಿಕೊಳ್ಳಬೇಕೆಂದರೆ 3 ನೇ ಪ್ರತಿವಾದಿಯವರಿಂದ ಪರವಾನಿಗೆ ಪಡೆಯಬೇಕೆಂದರೆ ಸರಿ. ಪೈಪ್ ಲೈನ್ ಹಾಕಿರುವ ಚಕ್ಕುಬಂದಿ ನನಗೆ ಗೊತ್ತು. ಪೈಪ್ ಲೈನ್ ಹಾಕಿರುವ ಚಕ್ಕುಬಂದಿ ಪೂಃಭಾಸ್ಕರ ರಾವ್ ಇವರ ಜಮೀನು, ಪಃ 1 ನೇ ವಾದಿಯ ಜಮೀನು, ಉಃ ಟಿ ಬಿ ಜಮೀನು ಹಾಗೂ ದಃಹಳ್ಳ ಬರುತ್ತದೆ. ಈ ದಾವೆಯಲ್ಲಿ ನಾನು 3 ನೇ ವಾದಿ ಇರುತ್ತೇನೆ. ನನಗೆ 1 ನೇ ವಾದಿ ನನ್ನ ದೊಡ್ಡಪ್ಪನ ಮಗ

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ